ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,

ಹೊನ್ನಾಳಿ

**ಸಿ.ಸಿ. ನಂ.545/2022**

| | | |
|---|---|---|
| ಪಿರ್ಯಾದುದಾರರು | : | ಜಿ ರೇಣುಕಪ್ಪ<br>ಬಿನ್ ಗೌಡರ ಗಿರಿಮಲ್ಲಪ್ಪ<br>70 ವರ್ಷ,<br>ವಾಸಃ ಚೀಲೂರು ಗ್ರಾಮ, ನ್ಯಾಮತಿ ತಾಲ್ಲೂಕು |

ವಿರುದ್ಧ

| | | |
|---|---|---|
| ಆರೋಪಿ | : | ಪರಶುರಾಮ ಬಿನ್ ನಾಗಪ್ಪ,<br>53 ವರ್ಷ ವಾಸಃ ಮ್ಯಾನೇಜರ್,<br>ದಾವಣಗೆರೆ ಡಿ ಸಿ ಸಿ ಬ್ಯಾಂಕ್, ಚೀಲೂರು ಶಾಖೆ,<br>ನ್ಯಾಮತಿ ತಾಲ್ಲೂಕು, ದಾವಣಗೆರೆ |

ಭಾ. ದಂ. ಪ್ರ. ಸಂ. ಕಲಂ. 313 ರನ್ವಯ ಆರೋಪಿತರ ಹೇಳಿಕೆ

ಪ್ರಶ್ನೆಃ 1 ಃ ನ್ಯಾಯಾಲಯದ ಮುಂದೆ ದೂರಿನೊಂದಿಗೆ ಫಿರ್ಯಾದುದಾರರು ತಮ್ಮ ಪ್ರಮಾಣಪತ್ರದಲ್ಲಿ ತಿಳಿಸಿರುವ ವಿಚಾರವನ್ನು ತಿಳಿದುಕೊಂಡಿದ್ದೀರಾ?

ಉತ್ತರ ಃ

ಪ್ರಶ್ನೆಃ 2ಃ ಜಿ ರೇಣುಕಪ್ಪ ಇವರು ತಮ್ಮ ಪ್ರಮಾಣಪತ್ರದಲ್ಲಿ ಆರೋಪಿಯಾದ ನೀವು 2019 ನೇ ವರ್ಷದ ಫೆಬ್ರವರಿ ತಿಂಗಳಿನ ಮೊದಲ ವಾರದಲ್ಲಿ ವ್ಯವಹಾರದ ಸಾಲಗಳ ತಿರುವಳಿ ಮತ್ತು ಇತರೆ ತುರ್ತು ಅಗತ್ಯಗಳ ಸಲುವಾಗಿ ತನ್ನ ಬಳಿ ರೂ. **8,00,000/-** ಹಣವನ್ನು ಕೈಗಡ ರೂಪದಲ್ಲಿ ಕೊಡವಂತೆ ಕೇಳಿದ್ದರಿಂದ ಮತ್ತು ಸದರಿ ಹಣವನ್ನು ಎರಡು-

ಮೂರು ತಿಂಗಳೊಳಗಾಗಿ ಹಿಂತಿರುಗಿಸುವುದಾಗಿ ಕೇಳಿಕೊಂಡಿದ್ದರಿಂದ ರೂ.8,00,000/- ಹಣವನ್ನು ಆರೋಪಿಯಾದ ನಿಮಗೆ ನೀಡಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಚಿಸುತ್ತೀರಿ ?

ಉತ್ತರ ಃ

ಪ್ರಶ್ನೆ: 3 ಃ ಚಾಸಾ.1 ರವರು ಮುಂದುವರೆದು ತಮ್ಮ ಪ್ರಮಾಣಪತ್ರದಲ್ಲಿ ನೀವು ತೆಗೆದುಕೊಂಡಿರುವ ಸಾಲದ ಹಣಕ್ಕೆ ನೀವು ತನಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹೊನ್ನಾಳಿ ಶಾಖೆಗೆ ಸೇರಿದ ಚೆಕ್ ನಂ.**962427** ನೇ ಚೆಕ್‌ನ್ನು ಕೊಟ್ಟು ಸದರಿ ಚೆಕ್‌ನ್ನು ದಿಃ 26-04-2019 ರಂದು ಸಿಂಡಿಕೇಟ್ ಬ್ಯಾಂಕ್ ಶಾಖೆಗೆ ನಗದೀಕರಣಕ್ಕಾಗಿ ಸಲ್ಲಿಸಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಚಿಸುತ್ತೀರಿ ?

ಉತ್ತರ ಃ

ಪ್ರಶ್ನೆ: 4 ಃ ಚಾಸಾ.1 ರವರು ಮುಂದುವರೆದು ತಮ್ಮ ಪ್ರಮಾಣಪತ್ರದಲ್ಲಿ ನಂತರ ಸದರಿ ಚೆಕ್ ಫನ್ಡ್ ಇನ್‌ಸಫೀಸಿಯೆಂಟ್ ಎಂಬ ಕಾರಣದಿಂದ ಅಮಾನ್ಯಗೊಂಡಿರುತ್ತದೆ ಎಂದು ಮೆಮೋ ಮೂಲಕ ವಾಪಸ್ ಬಂದಿದ್ದರಿಂದ ತಾನು ನಿಮಗೆ ದಿಃ 16-05-2019 ರಂದು ವಕೀಲರ ಮೂಲಕ ನೋಟಿಸನ್ನು ನೋಂದಾಯಿತ ಅಂಚೆಯ ಮೂಲಕ ಕಳುಹಿಸಿ ಹಣವನ್ನು ಮರುಪಾವತಿಸುವಂತೆ ತಿಳಿಸಿದ್ದರೂ ನೀವು ಸಾಲದ ಹಣವನ್ನು ಮರುಪಾವತಿಸಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಚಿಸುತ್ತೀರಿ ?

ಉತ್ತರ ಃ

ಪ್ರಶ್ನೆ 5 :  ನೀವು ಹೇಳುವುದು ಏನಾದರೂ ಇದೆಯೇ ?

ಉತ್ತರ ಃ

ಪ್ರಶ್ನೆ 6:  ನಿಮ್ಮ ಪರ ಯಾರಾದರೂ ಸಾಕ್ಷಿದಾರರನ್ನು ವಿಚಾರಣೆ ಮಾಡಿಕೊಳ್ಳುವಿರಾ ?

ಉತ್ತರ ಃ

(ಆರೋಪಿಯ ಹೇಳಿಕೆಯನ್ನು ಆತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತು ಎಂದು ದೃಢೀಕರಿಸುತ್ತೇನೆ .)

ಸ್ಥಳ:ಹೊನ್ನಾಳಿ
ದಿನಾಂಕ : 02-05-2024

(ದೇವದಾಸ್ ಹೆಚ್.)
ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹೊನ್ನಾಳಿ.